ಆರ್ಥಿಕ ಕಾರ್ಯಕ್ರಮಗಳು

1. ಗಿರಿಜನ ಉಪಯೋಜನೆಯಡಿಯಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಕೈಗಾರಿಕೆ ಮತ್ತು ವಾಣಿಜ್ಯ ಮತ್ತಿತರ ಅಭಿವೃದ್ಧಿ ಇಲಾಖೆಗಳ ವತಿಯಿಂದ ಆರ್ಥಿಕೋನ್ನತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2. ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ, ಪರಿಶಿಷ್ಟ ಪಂಗಡದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಪರ ಕೋರ್ಸ್‌ಗಳಲ್ಲಿ ಉಚಿತ ತರಬೇತಿ ನೀಡಲಾಗುತ್ತಿದ್ದು ತರಬೇತಿ ಅವಧಿಯಲ್ಲಿ ಮಾಹೆಯಾನ ರೂ. 500.00ಗಳ ಶಿಷ್ಯವೇತನ ನೀಡಲಾಗುತ್ತಿದೆ.

3. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಮತ್ತು ಸಮೂಹಿಕ ನೀರಾವರಿ ಕೊಳವೆ ಬಾವಿಗಳನ್ನು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದವತಿಯಿಂದ ಒದಗಿಸಲಾಗುತ್ತಿದೆ.

4. ವಸತಿ ರಹಿತರಿಗೆ ಅಂಬೇಡ್ಕರ್, ಆಶ್ರಯ ಮತ್ತು ಐಟಿಡಿಪಿ ವಸತಿ ಯೋಜನೆಯಡಿ ತಲಾ ರೂ. 20000.00 ಘಟಕ ವೆಚ್ಚದಲ್ಲಿ ವಾಸದ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

5. ಪರಿಶಿಷ್ಟ ಪಂಗಡದವರ ಕಾಲೋನಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸುವ ಕಾರ್ಯಕ್ರಮದಡಿ ಸಂಪರ್ಕ ರಸ್ತೆ, ಚರಂಡಿ ನಿರ್ಮಾಣ, ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ.

2003–2004 ಸಾಲಿನಲ್ಲಿ ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಇಲಾಖೆಯ ಕಾರ್ಯಕ್ರಮಗಳು ಸೇರಿದಂತೆ ಒಟ್ಟು ರೂ. 130.09 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು 29000 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸೌಲಭ್ಯ ನೀಡುವ ಗುರಿ ಹಾಕಿಕೊಳ್ಳಲಾಗಿದೆ. ಇದಲ್ಲದೇ ಕೇಂದ್ರ ಯೋಜನೆಯಡಿ ರೂ. 21.48 ಕೋಟಿಗಳ ಕೇಂದ್ರೀಯ ನೆರವನ್ನು ನಿರೀಕ್ಷಿಸಲಾಗಿದೆ.

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾದ ಬಾಕಿ

3681(4137) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಇರುವ ಸಕ್ಕರೆ ಕಾರ್ಖಾನೆಗಳು ಯಾವುವು;

ಆ) ಈ ಕಾರ್ಖಾನೆಗಳ ಪೈಕಿ ಯಾವ ಯಾವ ಕಾರ್ಖಾನೆಗಳು ಯಾವ ಯಾವ ರೈತರಿಗೆ ಎಷ್ಟೆಷ್ಟು ಮೊತ್ತವನ್ನು ಕಬ್ಬಿನ ಬಾಬ್ತು ಬಾಕಿ ಉಳಿಸಿಕೊಂಡಿವೆ: (ವಿವರ ನೀಡುವುದು);

ಇ) ಹೀಗೆ ಬಾಕಿ ಉಳಿಸಿಕೊಳ್ಳಲು ಕಾರಣಗಳೇನು, ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಕೂಡಲೇ ರೈತರಿಗೆ ಕೊಡಿಸಿಕೊಡಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ. ಹಾಗೂ ಕೈಗೊಳ್ಳಲಿರುವ ಕ್ರಮಗಳೇನು;

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 42 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ 12 ಸಹಕಾರಿ ವಲಯದಲ್ಲಿ, 2 ಸಾರ್ವಜನಿಕ ವಲಯದಲ್ಲಿ, ಒಂದು ಜಂಟಿ ವಲಯದಲ್ಲಿ ಹಾಗೂ 20 ಸಕ್ಕರೆ ಕಾರ್ಖಾನೆಗಳು ಖಾಸಗಿ ವಲಯದಲ್ಲಿವೆ. ವಿವರ ಅನುಬಂಧ 1 ರಲ್ಲಿ ಕೊಡಲಾಗಿದೆ.

ಆ) ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ನೀಡಬೇಕಾಗಿರುವ ಬಾಕಿ ಮೊತ್ತದ ವಿವರ ಈ ಕೆಳಕಂಡಂತೆ ಇವೆ:

(ಕೋಟಿ ರೂ.ಗಳಲ್ಲಿ)

ಕ್ಷೇತ್ರ	ಪಾವತಿಸಬೇಕಾಗಿದ್ದ ಮೊತ್ತ	ಪಾವತಿಸಲಾದ ಮೊತ್ತ	ಉಳಿಕೆ	ಹಿಂದಿನ ವರ್ಷಗಳ ಬಾಕಿ
1	2	3	4	5
ಸಹಕಾರ	406.06	340.58	65.48	41.05
ಸಾರ್ವಜನಿಕ/ಜಂಟಿ	119.95	101.95	18.00	1.10
ಖಾಸಗಿ	629.44	437.24	192.20	4.37
ಒಟ್ಟು	**1155.45**	**879.77**	**275.68**	**46.52**

ದಿನಾಂಕ 30–06–2003ರಲ್ಲಿ ಇದ್ದಂತೆ ವಿವರವನ್ನು ಅನುಬಂಧ 2 ರಲ್ಲಿ ಕೊಡಲಾಗಿದೆ.

ಇ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಬೆಲೆಯಲ್ಲಿನ ಕುಸಿತದಿಂದಾಗಿ ಸಕ್ಕರೆ ಉದ್ಯಮವು ತೀವ್ರ ತರವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 12.60 ಲಕ್ಷ ಟನ್ ಸಕ್ಕರೆ ದಾಸ್ತಾನಿದ್ದು ಇದರ ಅಂದಾಜು ಮೌಲ್ಯ ರೂ. 1400 ಕೋಟಿ ಆಗುತ್ತದೆ. ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೊಡಬೇಕಾದ ಒಟ್ಟು ಕಬ್ಬು ಬಿಲ್ಲಿನ ಬಾಕಿ ರೂ. 322.20 ಕೋಟಿ, ಕಾರ್ಖಾನೆಗಳ ಗೋದಾಮಿನಲ್ಲಿರುವ ಸಕ್ಕರೆ ಮೌಲ್ಯಕ್ಕೆ ತುಲನೆ ಮಾಡಿದರೆ ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ಲಿನ ಬಾಕಿ ಪ್ರತಿಶತ 23ರಷ್ಟು ಆಗುತ್ತದೆ. ಕೇಂದ್ರ ಸರ್ಕಾರದ ಆದೇಶದಂತೆ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಆದುದರಿಂದ ರೈತರ ಕಬ್ಬಿನ ಬಿಲ್ಲಿನ ಬಾಕಿ ತೀರಿಸಲು ಸಾಧ್ಯವಾಗಿರುವುದಿಲ್ಲ.

ಒಟ್ಟು ರೂ. 1155.45 ಕೋಟಿ ಬಾಕಿ ಪಾವತಿ ಮಾಡಬೇಕಾಗಿದ್ದು ಇದರ ಪೈಕಿ ರೂ. 879.72 ಕೋಟಿ ಪಾವತಿ ಮಡಲಾಗಿದ್ದು ರೂ. 275.68 ಕೋಟಿ ಪಾವತಿಯಾಗಬೇಕಾಗಿದೆ. ಹಿಂದಿನ ವರ್ಷಗಳ ಬಾಕಿ ರೂ. 46.52 ಕೋಟಿ ಇರುತ್ತದೆ. ಆದರೆ ಕೆಲವೊಂದು ಕಾರ್ಖಾನೆಗಳು ತಮ್ಮದೇ ಆದ ಹಣಕಾಸಿನ ಅಶಿಸ್ತಿನಿಂದಾಗಿ ಬಾಕಿ ಉಳಿಸಿಕೊಂಡಿವೆ ಅಂತಹ ಕಾರ್ಖಾನೆಗಳ ವಿರುದ್ಧ ಕಬ್ಬು (ನಿಯಂತ್ರಣ) ಆದೇಶ 1966ರ ಅನ್ವಯ ಕ್ರಮ ಜರುಗಿಸಲಾಗುತ್ತಿದೆ. ಕಬ್ಬು ಬೆಲೆ ಬಾಕಿ ತೀರಿಸಲು ಸರ್ಕಾರವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು ಈ ದಿಸೆಯಲ್ಲಿ ತೀರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ 6 ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ರೂ. 34.72 ಕೋಟಿಗಳಷ್ಟು ಮೃದು ಸಾಲವನ್ನು ಮಂಜೂರು ಮಾಡಿ ರೈತರ ಕಬ್ಬು ಬೆಲೆ ಬಾಕಿ ತೀರಿಸುವಲ್ಲಿ ಸಹಾಯ ಮಾಡಿದೆ. ವಿವರ ಈ ಕೆಳ ಕಂಡಂತಿದೆ.

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	ಯಾವ ಸಾಲಿನಲ್ಲಿ ಬಿಡುಗಡೆಯಾಗಿದೆ	ಮೊತ್ತ ಕೋಟಿ ರೂ.ಗಳಲ್ಲಿ
1	2	3	4
01.	ಪಾಂಡವಪುರ	2001–02	
		2002–03	12.30

1	2	3	4
02.	ಕರ್ನಾಟಕ	2001–02	4.00
03.	ಶ್ರೀ ಶ್ರೀರಾಮ	2001–02	6.00
04.	ವಾಣಿವಿಲಾಸ	2001–02	5.00
05.	ಆಳಂದ	2000–01	
		2002–03	5.50
06.	ದಕ್ಷಿಣ ಕನ್ನಡ	2003–04	1.92
	ಒಟ್ಟು		**34.72**

Number of Sugar Factories in Karnataka

Annexure-I

Name of the Sugar Factory Co-operative Sector.

1. Bhadra SSK Ltd., Doddabathi, Davanagere Taluk And District.
2. Bhagyalakshmi SSK(N), Khanapur, Belgaum District.
3. Bidar SSK (N), Halikhed, Bidar, District.
4. Dakshina Kannada SSK Ltd., Brahmavara Udupi District.
5. Doodhaganga Krishna SSK Ltd., Chikkodi, Belgaum District.
6. Ghataprabha SSK Ltd., Gokak, Belgaum District.
7. Halasiddanatha SSK Ltd., Nipani, Belgaum District.
8. Heemavathy SSK Ltd., Srinivasapura, Channarayapatna Taluk Hassan District.
9. Hiranyakeshi SSK Ltd., Sankeshwar, Belgaum District.
10. Karnataka SSK Ltd., Haveri Dist.
11. Malaprabha SSK Ltd., M.K. Hubli, Bailahongal Taluk, Belgaum District.
12. Nandi SSK Ltd., Krishna nagar, Bijapur District.
13. Pandavapura SSK Ltd., Pandavapura, Mandya District.
14. Raibag SSK Ltd., Raibag, Belgaum, District.
15. Raithara SSK Ltd., Ranna nagar, Mudhol, Taluk, Bagalkot District.
16. SSK Aland, Bhusanoor Aland, Gulbarga Dist.
17. Sri Srirama SSK Ltd., Chunchanakatte, K.R. Nagar, Taluk, **Mysore District.**
18. Vanivilasa CSF Ltd., Hiriyur Taluk, Chitradurga District.

Public Sector:

19. M.P.M. Sugars Ltd., Bhadravathi, Shimoga District.

20. Mysore Sugar Co., Mandya District.

Joint Sector:

21. Gangavathi Sugars, Pragathinagar, Koppal District.

Private Sector:

22. Banndri Amman Sugars, Ltd., Alaganchi, Nanjanagud Taluk, Mysore District.
23. Chamundeshwari, Sugars, K.R. Doddi, Maddur taluk, Mandya District.
24. Davanagere Sugars Kukkawada, Davanagere Taluk and District.
25. Godawwari Sugars Ltd., Sameerwadi Bagalkote District.
26. The India Sugars and Refineries Ltd., Hospet, Bellary Dist.
27. I.C.L. Sugars Ltd., Mallenahalli, K.R.Pet.
28. Mahadeshwara Sugars, Kunthur Kollegal, K.R.Pet Taluk, Mandya District.
29. Prabhulingeshwara Sugars Ltd., Siddapura, Jamkhandi Taluk Bagalkot District.
30. Renuka Sugars Ltd., Manoli, Saudatti Taluk, Belgaum Dist.
31. Siguppa Sugars and Chemicals Ltd., Deasnur, Bellary District.
32. Siragura Sugars and Chemicals, Ltd., Gowribidanur Kolar Dist.
33. Sudari Sugars (Kampli) Bellary District.
34. Shamanur Sugars Ltd., Duggavathi, Harapana Halli, Taluk, Davanagere Dist.
35. Ugar Sugars Ltd., Uggar Khurd, Belgaum District.
36. Jamkhandi Sugars Ltd., Hirepadasalagi, Jamakhandi Taluk, Bagalkote District.
37. Nirani Sugargs Ltd., Mudhol Taluk,Bagalkote District.
38. Athani Farmers Sugar Works Ltd., Hadabavi, Athani Taluk, Belgaum District.
39. Venkateshwara Power Project Ltd., A/P, Bedkihal, Chikodi, Belgaum District.
40. Krishan (N) Athani At post Sanjonatti, Athani Taluk, Belgaum District.
41. Naranja SSK Ltd., Imampur, Near Janewada Taluk And District, Bidar-585403.
42. Gem Sugars Ltd., Kundargi Village, Biligi Taluk, Bagalkot District-587204.